ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 2, May-June 2023, Pp. 4-6
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕರ್ನಾಟಕ ಪಬ್ಲಿಕ್ ಶಾಲೆಯ ಮೂಲಭೂತ ಸೌಕರ್ಯಗಳ ಅಧ್ಯಯನ

**ಡಾ. ಶಹತಾಜ್ ಬೇಗಂ**[1] **& ವೀರಣ್ಣಧ. ಹೂಲಗೇರಿ**[2]

[1]ಪ್ರಾಧ್ಯಾಪಕರು & [2]ಸಂಶೋಧನಾರ್ಥಿ

ಶಿಕ್ಷಣ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

***Abstract:***

*ಶಿಕ್ಷಣವು ಮಗುವಿನ ಸರ್ವತೋಮುಖ ವಿಕಾಸದ ಪ್ರಮುಖ ಮಾಧ್ಯಮ. ಕುಟುಂಬದ ನಂತರ ಶಿಕ್ಷಣ ಸಂಸ್ಥೆಗಳು ಮಗುವಿನ ಭವಿಷ್ಯವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಶಿಕ್ಷಣ ಕ್ಷೇತ್ರವು ದೇಶದ ಅತಿದೊಡ್ಡ ಸಾರ್ವಜನಿಕ ಸೇವಾವಲಯವಾಗಿದೆ. ಶಿಕ್ಷಣದ ಗುಣಮಟ್ಟ ಸುದಾರಣೆಗೆ ಎಲ್ಲ ಸರಕಾರಗಳು ವಿನೂತನ ಯೋಜನೆಗಳನ್ನು ಅಗತ್ಯತೆಗಳಿಗನುಗುಣವಾಗಿ ಜಾರಿಗೊಳಿಸಿವೆ. ಪ್ರಸ್ತುತ ಲೇಖನವು 2017 ರಿಂದ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಸರ್ಕಾರ ಒದಗಿಸಿರುವ ಮೂಲಭೂತ ಸೌಕರ್ಯಗಳು ಹಾಗೂ ಮೂಲಭೂತ ಸೌಕರ್ಯಗಳ ಬಗೆಗೆ ವಿದ್ಯಾರ್ಥಿಗಳ ಅಭಿಪ್ರಾಯ ಮತ್ತು ಅನುಭವಗಳನ್ನು ವಿವರಿಸುತ್ತದೆ.*

***Keywords:*** *ಶಿಕ್ಷಣ, ಶಾಲೆ, ಮಕ್ಕಳು, ಕರ್ನಾಟಕ ಪಬ್ಲಿಕ್ ಶಾಲೆ, ಮೂಲಭೂತ ಸೌಲಭ್ಯಗಳು.*

## ಪೀಠಿಕೆ

ಕರ್ನಾಟಕ ರಾಜ್ಯವು ಪ್ರಸ್ತುತ 45,000 ಸರಕಾರಿ ಪ್ರಾಥಮಿಕ, 5,500 ಸರಕಾರಿ ಪ್ರೌಢ ಶಾಲೆಗಳು, 1300 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಹೊಂದಿರುವ ದೊಡ್ಡದಾದ ಶೈಕ್ಷಣಿಕ ವ್ಯವಸ್ಥೆಯನ್ನು ಒಳಗೊಂಡಿದೆ. ಶಿಕ್ಷಣವು ವ್ಯಕ್ತಿಯ ಮೂಲಭೂತ ಹಕ್ಕು ಅದನ್ನು ಪೂರೈಸಲು ಸರಕಾರವು ಸಕಲ ರೀತಿಯ ಪ್ರಯತ್ನವನ್ನು ಮಾಡುತ್ತದೆ. ಈ ಎಲ್ಲ ಪ್ರಯತ್ನಗಳು ಶಿಕ್ಷಣ ಕ್ಷೇತ್ರಗಳಲ್ಲಿ ಸಕಾಲಿಕವಾದ ಅಗತ್ಯ ಪೂರ್ಣವಾದ ಬದಲಾವಣೆಗಳನ್ನು ಮಾಡುತ್ತ ಬಂದಿದೆ. ಇವುಗಳ ಫಲವಾಗಿ ಕರ್ನಾಟಕ ಪಬ್ಲಿಕ್ ಶಾಲೆಗಳ ರಚನೆ ಅಸ್ತಿತ್ವದಲ್ಲಿದೆ.

## ಕರ್ನಾಟಕ ಪಬ್ಲಿಕ್ ಶಾಲೆ

ಕರ್ನಾಟಕ ಸರಕಾರವು ಕರ್ನಾಟಕದಲ್ಲಿ ಶಾಲಾ ಶಿಕ್ಷಣದಲ್ಲಿ ಬದಲಾವಣೆಯನ್ನು ಮನಗಂಡು ತನ್ನ ಸರಕಾರಿ ಆದೇಶ ಸಂಖ್ಯೆ ED04 vosaka 2017, ಬೆಂಗಳೂರು ದಿನಾಂಕ: 05–01–2015 ರಂದು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಪ್ರಾರಂಭಿಸಲು ಅಧಿಕೃತ ಆದೇಶವನ್ನು ಹೊರಡಿಸಿದೆ.

ಕರ್ನಾಟಕ ಪಬ್ಲಿಕ್ ಶಾಲೆಗಳ ಪರಿಕಲ್ಪನೆಯು ಪ್ರಾಥಮಿಕ ಹಂತದಿಂದ ಮಾಧ್ಯಮಿಕ ಹಂತದವರೆಗೆ ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣವನ್ನು ಕಡಿಮೆಗೊಳಿಸುವುದಾಗಿದೆ. ಅಲ್ಲದೆ ಪೂರ್ವ ಪ್ರಾಥಮಿಕ ಹಂತದಿಂದ 12ನೇ ತರಗತಿಯವರೆಗೆ ಒಂದೇ ಆವರಣದಲ್ಲಿ ಶಿಕ್ಷಣವನ್ನು ಒದಗಿಸುವುದಾಗಿದೆ.

## ಸಂಬಂಧಿತ ಸಾಹಿತ್ಯಾವಲೋಕನ

ಜಯಂತಿಲಾಲ್ಎಸ್. ಪಟೇಲ್ (1985) ರವರು ತಮ್ಮ ಉತ್ತರ ಗುಜರಾತ್‌ನ ಕಿವುಡ ಮತ್ತು ಮೂಕ

***Please cite this article as:*** ಶಹತಾಜ್ ಬೇಗಂ & ವೀರಣ್ಣಧ. ಹೂಲಗೇರಿ. (2023). ಕರ್ನಾಟಕ ಪಬ್ಲಿಕ್ ಶಾಲೆಯ ಮೂಲಭೂತ ಸೌಕರ್ಯಗಳ ಅಧ್ಯಯನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(2), 4–6.

ಮಕ್ಕಳ ಶಾಲೆಗಳ ಭೌತಿಕ ಸೌಲಭ್ಯಗಳ ಬಗ್ಗೆ ಅಧ್ಯಯನ ಮಾಡಿದ್ದು, ತಮ್ಮ ಅಧ್ಯಯನದಲ್ಲಿ ಈ ಶಾಲೆಗಳ ಕಟ್ಟಡಗಳನ್ನು ಬಾಡಿಗೆಗೆ ನೀಡಿರುವುದ್ದರಿಂದ ಸೂಕ್ತ ಸೌಲಭ್ಯಗಳಿಲ್ಲ ಹಾಗೂ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಶಾಲಾ ಕೊಠಡಿಗಳು, ಆಟದ ಮೈದಾನ ಮುಂತಾದ ಸೌಲಭ್ಯಗಳ ಕೊರತೆಯಿರುವುದ್ದರಿಂದ ಮಕ್ಕಳ ಶಿಕ್ಷಣಕ್ಕೆ ಅಡಚಣೆಯಾಗಿದೆ ಎಂದು ಹೇಳಿದ್ದಾರೆ.

ಜಶುಭಾಯಿ ಎನ್. ದೇಸಾಯಿ (1995) ರವರು ನಾಲ್ಕು ಮಿಷನರಿ ಪ್ರೌಢಶಾಲೆಗಳ ಭೌತಿಕ ಮತ್ತು ಶೈಕ್ಷಣಿಕ ಸೌಲಭ್ಯಗಳ ಕುರಿತು ಅಧ್ಯಯನ ಮಾಡಿದ್ದು, ಎಲ್ಲ ಶಾಲೆಗಳಲ್ಲಿಯೂ ಸಹಾ ಸಾಕಷ್ಟು ತರಗತಿ ಕೊಠಡಿಗಳಿದ್ದು, ಕಲಾ ಕೊಠಡಿ, ಶುದ್ಧ ಕುಡಿಯುವ ನೀರಿನ ಸೌಲಭ್ಯ, ಪ್ರಧಾನ ಕಚೇರಿ, ಪ್ರಯೋಗಾಲಯ, ಗ್ರಂಥಾಲಯ ಮತು ್ತರಗತಿ ಕೊಠಡಿಗಳ ಸೌಲಭ್ಯಗಳನ್ನು ಹೊಂದಿರುವುದ್ದರಿಂದ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಿದೆ ಎಂದು ಹೇಳಿದ್ದಾರೆ.

**ಅಧ್ಯಯನ ಉದ್ದೇಶ**

- ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಅಭ್ಯಸಿಸುವುದು.
- ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿನ ಮೂಲಸೌಕರ್ಯಗಳ ಕುರಿತು ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ಅಭಿಪ್ರಾಯಗಳನ್ನು ತಿಳಿಯುವುದು.

**ಅಧ್ಯಯನ ವಿಧಾನ**

ಪ್ರಸ್ತುತ ಅಧ್ಯಯನವು ಸಮೀಕ್ಷಾ ವಿಧಾನವನ್ನು ಒಳಗೊಂಡಿದ್ದು ಸಂಶೋಧಕರು ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ವೈಯಕ್ತಿಕವಾಗಿ ಬೇಟಿ ನೀಡಿ ಅಧ್ಯಯನ ನಡೆಸಿದ್ದಾರೆ.

**ಪ್ರತಿಚಯನ**

ಪ್ರಸ್ತುತ ಅಧ್ಯನದಲ್ಲಿ ಪ್ರತಿಚಯನವಾಗಿ ಒಟ್ಟು 1200 ವಿದ್ಯಾರ್ಥಿಗಳಿಂದ ದತ್ತಾಂಶಗಳನ್ನು ಸಂಗ್ರಹಿಸಲಾಗಿದೆ ಮತ್ತು ಈ ಪ್ರತಿಚಯನವನ್ನು ಯಾದೃಚ್ಛಿಕ ಪ್ರತಿಚಯನ ತಂತ್ರದ ಮೂಲಕ ಆಯ್ಕೆ ಮಾಡಲಾಗಿದೆ.

**ದತ್ತಾಂಶ ಸಂಗ್ರಹಣ ಸಾಧನ**

ಈ ಅಧಯನಕ್ಕೆ ಬೇಕಾಗುವ ವಿದ್ಯಾರ್ಥಿಗಳ ದತ್ತಾಂಶಗಳನ್ನು ಸಂಗ್ರಹಿಸಲು ಸಂಶೋಧನಾರ್ಥಿಯು 30 ಪರೀಕ್ಷಾಂಶಗಳುಳ್ಳ ಪ್ರಶ್ನಾವಳಿಯನ್ನು ಅಭಿವೃದ್ಧಿಪಡಿಸಿ ಅದರ ಸಿಂಧುತ್ವ ಮತ್ತು ವಿಶ್ವಾಸಾರ್ಹತೆಯನ್ನು ಪರೀಕ್ಷಿಸಿ ಅಂತಿಮ ಪ್ರಶ್ನಾವಳಿಯಿಂದ ದತ್ತಾಂಶವನ್ನು ಸಂಗ್ರಹಿಸಲಾಗಿದೆ.

**ದತ್ತಾಂಶಗಳ ವಿಶ್ಲೇಷಣೆ**

**ಪ್ರಾಕಲ್ಪನೆ:** ಕರ್ನಾಟಕ ಪಬ್ಲಿಕ್ ಶಾಲೆಯ ಕಾರ್ಯಸ್ಥಿತಿಗೆ ಸಂಬಂಧಿಸಿದಂತೆ ಬಾಲಕರು ಮತ್ತು ಬಾಲಕಿಯರು ಎದುರಿಸುತ್ತಿರುವ ಮೂಲ ಸೌಕರ್ಯಗಳಿಗೆ ಸಂಬಂಧಿಸಿದ ಅಂಶಗಳಿಗೆ ಸಂಬಂಧಿಸಿದ ಅಭಿಪ್ರಾಯದಲ್ಲಿ ಯಾವುದೇ ಲಕ್ಷಾರ್ಯ ವ್ಯತ್ಯಾಸವಿಲ್ಲ.

**ಕೋಷ್ಟಕ 1:** ಕರ್ನಾಟಕ ಪಬ್ಲಿಕ್ ಶಾಲೆಯ ಕಾರ್ಯಸ್ಥಿತಿಗೆ ಸಂಬಂಧಿಸಿದಂತೆ ಬಾಲಕರು ಮತ್ತು ಬಾಲಕಿಯರು ಎದುರಿಸುತ್ತಿರುವ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಅಂಶಗಳಿಗೆ ಸಂಬಂಧಿಸಿದ ಅಭಿಪ್ರಾಯದ ಹೋಲಿಕೆಯನ್ನು ಸೂಚಿಸುವ ಕೋಷ್ಟಕ

| ಲಿಂಗ | ಸಂಖ್ಯೆ | ಸರಾಸರಿ | ಮಾನಕ ವಿಚಲನೆ | t-ಮೌಲ್ಯ | p-ಮೌಲ್ಯ | ಫಲಿತಾಂಶ |
|---|---|---|---|---|---|---|
| ಬಾಲಕರು | 440 | 35.0500 | .87603 | 8.932 | .000 (p<05) | ಲಕ್ಷಾರ್ಹ ವ್ಯತ್ಯಾಸವಿದೆ |
| ಬಾಲಕಿಯರು | 660 | 34.6121 | .65959 | | | |

**ಆಲೇಖ 1:** ಕರ್ನಾಟಕ ಪಬ್ಲಿಕ್ ಶಾಲೆಯ ಕಾರ್ಯಸ್ಥಿತಿಗೆ ಸಂಬಂಧಿಸಿದಂತೆ ಬಾಲಕರು ಮತ್ತು ಬಾಲಕಿಯರು ಎದುರಿಸುತ್ತಿರುವ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಅಂಶಗಳಿಗೆ ಸಂಬಂಧಿಸಿದ ಅಭಿಪ್ರಾಯ ಸೂಚಿಸುವ ಆಲೇಖ




ಮೇಲಿನ ತಾಲಿಕೆಯಿಂದ ತಿಳಿಯುವುದೆನೆಂದರೆ ಲೆಕ್ಕಾಚಾರ ಮಾಡಿದ t–ಮೌಲ್ಯ 8.932 ಹಾಗೂ p–ಮೌಲ್ಯ .000 ಆಗಿದೆ. ಇಲ್ಲಿ ಪಡೆದ p–ಮೌಲ್ಯ ಸಂಭವನೀಯ p–ಮೌಲ್ಯ .05ಕ್ಕಿಂತ ಕಡಿಮೆಯಿದೆ. ಆದ್ದರಿಂದ ಶೂನ್ಯ ಪ್ರಾಕಲ್ಪನೆಯನ್ನು ತಿರಸ್ಕರಿಸಿ ಪರ್ಯಾಯ ಪ್ರಾಕಲ್ಪನೆಯನ್ನು ಸ್ವೀಕರಿಸಲಾಗಿದೆ. ಅಂದರೆ, ಕರ್ನಾಟಕ ಪಬ್ಲಿಕ್ ಶಾಲೆಯ ಕಾರ್ಯಸ್ಥಿತಿಗೆ ಸಂಬಂಧಿಸಿದಂತೆ ಬಾಲಕರು ಮತ್ತು ಬಾಲಕಿಯರು ಎದುರಿಸುತ್ತಿರುವ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಅಂಶಗಳಿಗೆ ಸಂಬಂಧಿಸಿದ ಅಭಿಪ್ರಾಯದಲ್ಲಿ .05 ಮಟ್ಟದಲ್ಲಿ ಲಕ್ಷಾರ್ಹ ವ್ಯತ್ಯಾಸವಿದೆ.

ಮೇಲಾಗಿ ಸರಾಸರಿ ತುಲನೆಯಿಂದ ತಿಳಿದು ಬರುವುದೇನೆಂದರೆ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಅಂಶಗಳಿಗೆ ಸಂಬಂಧಿಸಿದಂತೆ ಬಾಲಕರಿಗಿಂತ ಬಾಲಕಿಯರ ಸರಾಸರಿಯು ಕಡಿಮೆಯಿರುವುದುಕಂಡು ಬಂದಿದೆ. ಅಂದರೆ, ಕರ್ನಾಟಕ ಪಬ್ಲಿಕ್ ಶಾಲೆಯ ಕಾರ್ಯಸ್ಥಿತಿಗೆ ಸಂಬಂಧಿಸಿದಂತೆ ಬಾಲಕರಿಗಿಂತ ಬಾಲಕಿಯರು ಹೆಚ್ಚಿನ ಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಅಂಶಗಳಿಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಎದುರುಸುತ್ತಿರುವುದು ಅಧ್ಯಯನದಿಂದ ವ್ಯಕ್ತವಾಗಿದೆ.

**ತೀರ್ಮಾನ**

ಕರ್ನಾಟಕ ಪಬ್ಲಿಕ್ ಶಾಲೆಗಳ ಮೂಲ ಸೌಲಭ್ಯಗಳಲ್ಲಿ ಕೊರತೆಗಳಿದ್ದು ಅವುಗಳು ವಿದ್ಯಾರ್ಥಿಗಳಿಗೆ ಸಮಸ್ಯಗಳಾಗಿ ಗೋಚರಿಸುತ್ತಿವೆ. ವಿಶೇಷವಾಗಿ ವಿದ್ಯಾರ್ಥಿನಿಯರ ಅಭಿಪ್ರಾಯವು ಇನ್ನಷ್ಟು ಹೆಚ್ಚಾಗಿದ್ದು ಮಹಿಳೆಯರಿಗೆ ಒದಗಿಸಬೇಕಾದ ಮೂಲಬೂತ ಸೌಕರ್ಯಗಳಿಗೆ ಹೆಚ್ಚಿನಆದ್ಯತೆ ನೀಡಬೇಕಾಗಿದೆ.

**ಪರಾಮರ್ಶನ ಗ್ರಂಥಗಳು**


- ಸಮಗ್ರ ಶಿಕ್ಷಣ ಅಭಿಯಾನ. (2018). *ಕರ್ನಾಟಕ ಪಬ್ಲಿಕ್ ಶಾಲೆಗಳ ಶಾಲಾಭಿವೃದ್ಧಿ ಯೋಜನೆ ಮಾರ್ಗಸೂಚಿಗಳು.* ರಾಜ್ಯಯೋಜನಾ ನಿರ್ದೇಶಕರ ಕಛೇರಿ.
- Agrawal J.C. (1966). *Educational Research an Introduction.* S.M. Agra Book Depot.
- Best john W. (1963). *Research in Education.* Prentice Hull of India Pvt. Ltd.
- Guilford, J.P. (1950). *Fundamental Statistics in Psychology and Education.* McGraw Hill book Co.
- Shukhla S.P. & Marlistga P.U. (1968). *Element of Educational Research.* Allied Published Bombay.